# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 902 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 22.02.2024 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಅಬಕಾರಿ ಇಲಾಖೆಯ ಉದ್ದೇಶ ಮತ್ತು ಕರ್ತವ್ಯಗಳು ಯಾವುವು; ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಯಿದೆಗಳು ಮತ್ತು ನಿಯಮಗಳು ಯಾವುವು; ಪೂರ್ಣ ಮಾಹಿತಿ ನೀಡುವುದು; | **ಅಬಕಾರಿ ಇಲಾಖೆಯ ಉದ್ದೇಶ, ಕರ್ತವ್ಯಗಳು ಹಾಗೂ ಕಾಯಿದೆ ಮತ್ತು ನಿಯಮಗಳು ಕೆಳಕಂಡಂತಿವೆ.**<br><br>**ಉದ್ದೇಶಗಳು:**<br>1. ರಾಜ್ಯದ ಬೊಕ್ಕಸಕ್ಕೆ ಆದಷ್ಟು ಹೆಚ್ಚಿನ ರಾಜಸ್ವವನ್ನು ಸಂಗ್ರಹಿಸುವುದು.<br>2. ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟವನ್ನು ಕ್ರಮಬದ್ಧಗೊಳಿಸುವುದು.<br>3. ಅಬಕಾರಿ ಸಂಬಂಧಿತ ಅಪರಾಧಗಳನ್ನು ನಿಯಂತ್ರಿಸಲು ಪರಿಣಾಮಕಾರಿ ಜಾರಿ ಮತ್ತು ತನಿಖೆಗಳನ್ನು ಕೈಗೊಳ್ಳುವುದು.<br>4. ಸಮರ್ಥತೆಯನ್ನು ಉತ್ತಮಪಡಿಸಲು ತರಬೇತಿ ನೀಡುವುದು ಮತ್ತು ಇ–ಆಡಳಿತ ಉಪಕ್ರಮಗಳನ್ನು ರೂಪಿಸುವುದು.<br><br>**ಕರ್ತವ್ಯಗಳು:**<br>1. ಅಬಕಾರಿ ರಾಜಸ್ವ ಸಂಗ್ರಹಣೆ.<br>2. ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟಕ್ಕಾಗಿ ಸನ್ನದುಗಳನ್ನು ನೀಡುವುದು.<br>3. ನಿರ್ದಿಷ್ಟ ಅಬಕಾರಿ ಸನ್ನದು ಪ್ರದೇಶಗಳ ತಪಾಸಣೆ ಕೈಗೊಳ್ಳುವುದು, ನಿಯತವಾಗಿ ದಾಳಿ ಮತ್ತು ರಸ್ತೆ ಗಸ್ತುಗಳನ್ನು ನಡೆಸುವುದು.<br>4. ಇಲಾಖೆಯ ವಿವಿಧ ಆಡಳಿತ ಹಂತಗಳಲ್ಲಿನ ಸಾಧನೆಯನ್ನು |

| | | |
|---|---|---|
| | | ನಿಯತ ಮಧ್ಯಂತರ ಅವಧಿಗಳಲ್ಲಿ ಪುನರ್ವಿಮರ್ಶಿಸುವುದು.<br>5. ಅಧಿಕಾರಿಗಳು ಮತ್ತು ಸಿಬ್ಬಂದಿಯ ತರಬೇತಿ.<br>6. ಅಬಕಾರಿ ಪರಿಶೀಲನಾ ಪ್ರಮಾಣ ಪತ್ರಗಳು (EVC) ಮತ್ತು ರಹದಾರಿ ಪ್ರಮಾಣ ಪತ್ರಗಳ ಪರಿಶೀಲನೆ.<br>7. ಅಬಕಾರಿ ಅಪರಾಧ ಪ್ರಕರಣಗಳ ನೋಂದಣಿ, ತನಿಖೆ ಹಾಗೂ ಕಾನೂನು ಕ್ರಮ ಜರುಗಿಸುವುದು.<br>8. ಎಲ್ಲಾ ಅಬಕಾರಿ ಸಂಬಂಧಿತ ವಸ್ತುಗಳ ವಹಿವಾಟಿನ ಮೇಲುಸ್ತುವಾರಿ.<br>9. ಇಲಾಖೆಯ ಕಾರ್ಯಚಟುವಟಿಕೆಗಳ ಗಣಕೀಕರಣ.<br>**ಇಲಾಖೆಯಲ್ಲಿ ಅನುಷ್ಠಾನದಲ್ಲಿರುವ ಕಾಯಿದೆಗಳು ಮತ್ತು ನಿಯಮಗಳು:**<br>**ಅ. ರಾಜ್ಯ ಮಟ್ಟದ ಅಧಿನಿಯಮಗಳು:**<br>1. ಕರ್ನಾಟಕ ಅಬಕಾರಿ ಕಾಯ್ದೆ, 1965.<br>2. ಮೇಲ್ಕಂಡ ಕಾಯ್ದೆ ಮೇರೆಗೆ ರಚಿತವಾದ ನಿಯಮ.<br>3. ನಾರ್ಕೋಟಿಕ್ ಡ್ರಗ್ಸ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ (ಕರ್ನಾಟಕ) ನಿಯಮಗಳು, 1985.<br>4. ಕರ್ನಾಟಕ ಪ್ರಿವೆಂಶನ್ ಆಫ್ ಡೇಂಜರಸ್ ಆಕ್ಟಿವಿಟೀಸ್ ಆಫ್ ಬೂಟ್‌ಲೆಗ್ಗರ್ಸ್, ಡ್ರಗ್ ಅಫೆಂಡರ್ಸ್, ಗ್ಯಾಂಬ್ಲರ್ಸ್, ಗೂಂಡಾಸ್, ಇಮ್ಮಾರಲ್ ಟ್ರಾಫಿಕ್ ಅಫೆಂಡರ್ಸ್ ಅಂಡ್ ಸ್ಲಮ್ ಗ್ರಾಬರ್ಸ್ ಮತ್ತು ವಿಡಿಯೋ ಅಥವಾ ಆಡಿಯೋ ಪೈರೇಟ್ಸ್ ಕಾಯ್ದೆ, 1985<br>**ಆ. ಕೇಂದ್ರ ಮಟ್ಟದ ಅಧಿನಿಯಮಗಳು:**<br>ನಾರ್ಕೋಟಿಕ್ ಡ್ರಗ್ಸ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ ಕಾಯ್ದೆ, 1985 (1985ರ ಕೇಂದ್ರ ಕಾಯ್ದೆ ಸಂಖ್ಯೆ 61) |
| ಆ | ಅಬಕಾರಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಯಿದೆಗಳ ಅನುಷ್ಠಾನಕ್ಕೆ ಸರ್ಕಾರ ಮತ್ತು ಇಲಾಖಾ ಮಟ್ಟದಲ್ಲಿ ಇರುವ | ಅಬಕಾರಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಯಿದೆಗಳ ಅನುಷ್ಠಾನಕ್ಕೆ ಸರ್ಕಾರ ಮತ್ತು ಇಲಾಖಾ ಮಟ್ಟದಲ್ಲಿ ಇರುವ ವ್ಯವಸ್ಥೆಗಳನ್ನು ಅನುಬಂಧದಲ್ಲಿ ಇರಿಸಿದೆ. ಅಬಕಾರಿ ಇಲಾಖೆಯ ಆಡಳಿತ ನಿರ್ವಹಣಾ ನಕ್ಷೆಯಂತೆ ಅಧಿಕಾರಿ/ನೌಕರರಿಂದ ಅನುಷ್ಠಾನಗೊಳಿಸಲಾಗುತ್ತಿದೆ. |

<table>
<tr><td></td><td>ವ್ಯವಸ್ಥೆಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)</td><td></td></tr>
<tr><td>ಇ</td><td>ಅಬಕಾರಿ ಇಲಾಖೆಯಲ್ಲಿ ಯಾವ-ಯಾವ ಮೂಲಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲಾಗುತ್ತಿದೆ; ಈ ಮೂಲಗಳಿಂದ ಕಳೆದ 3 ವರ್ಷಗಳಲ್ಲಿ ಕ್ರೋಢೀಕರಿಸಿದ ಸಂಪನ್ಮೂಲಗಳೆಷ್ಟು; (ಪೂರ್ಣ ಮಾಹಿತಿ ನೀಡುವುದು)</td><td>ಕಳೆದ 3 ವರ್ಷಗಳಲ್ಲಿ ಅಬಕಾರಿ ಇಲಾಖೆಯ ವಿವಿಧ ಮೂಲಗಳಿಂದ ಸಂಗ್ರಹಿಸಿದ ಅಬಕಾರಿ ರಾಜಸ್ವ ವಿವರಗಳು ಕೆಳಕಂಡಂತಿದೆ.<br>(ರೂ. ಕೋಟಿಗಳಲ್ಲಿ)
<table>
<tr><th>ಕ್ರ ಸಂ.</th><th>ಮೂಲ</th><th>2020-21</th><th>2021-22</th><th>2022-23</th></tr>
<tr><td>1</td><td>ಭಾರತೀಯ ತಯಾರಿಕಾ ಮದ್ಯ</td><td>20,217.80</td><td>22,899.10</td><td>24,663.85</td></tr>
<tr><td>2</td><td>ಬಿಯರ್</td><td>2,438,16</td><td>2,757.30</td><td>4,460.60</td></tr>
<tr><td>3</td><td>ಸನ್ನದು ಶುಲ್ಕ</td><td>643.87</td><td>684.10</td><td>745.84</td></tr>
<tr><td>4</td><td>ಇತರೆ</td><td>32.27</td><td>37.18</td><td>50.08</td></tr>
<tr><td colspan="2">ಒಟ್ಟು ಸಂಗ್ರಹವಾದ ಅಬಕಾರಿ ರಾಜಸ್ವ</td><td>23,332.10</td><td>26,377.68</td><td>29,920.37</td></tr>
</table></td></tr>
<tr><td>ಈ</td><td>ರಾಜ್ಯದಲ್ಲಿ ವಿವಿಧ ಬಗೆಯ ಎಷ್ಟು ಡಿಸ್ಟಿಲರಿಸ್‌ಗಳು ಇವೆ ಮತ್ತು ಕಳೆದ ಮೂರು ವರ್ಷಗಳಲ್ಲಿ ಇವುಗಳ ಉತ್ಪನ್ನವೆಷ್ಟು ಹಾಗೂ ಈ ಉತ್ಪನ್ನಗಳಿಂದ ರಾಜ್ಯದ ಬೊಕ್ಕಸಕ್ಕೆ ಸಂದಾಯವಾದ ತೆರಿಗೆ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಡಿಸ್ಟಿಲರಿ, ಬ್ರೀವರಿ ಮತ್ತು ವೈನರಿ ಸೇರಿ 3 ಬಗ್ಗೆಯ ಉತ್ಪಾದನಾ ಘಟಕಗಳು ಇವೆ. ಕಳೆದ 3 ವರ್ಷಗಳಲ್ಲಿ ಉತ್ಪಾದನೆಯಾದ ಮದ್ಯ ಹಾಗೂ ಮಾರಾಟವಾದ ಮದ್ಯದಿಂದ ಸಂಗ್ರಹವಾದ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕದ ವಿವರಗಳು ಕೆಳಕಂಡಂತಿದೆ.
<table>
<tr><th>ಕ್ರ ಸಂ.</th><th>ಘಟಕ</th><th>ವಿವರ</th><th>2020-21</th><th>2021-22</th><th>2022-23</th></tr>
<tr><td rowspan="2">1</td><td rowspan="2">ಡಿಸ್ಟಿಲರಿ ಮತ್ತು ವೈನರಿ</td><td>ಉತ್ಪಾದಿಸಿದ ಮದ್ಯ (ಲಕ್ಷ ಬಲ್ಕ್ ಲೀಟರ್)</td><td>5,136.79</td><td>5,975.57</td><td>6,433.76</td></tr>
<tr><td>ಸಂಗ್ರಹವಾದ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ</td><td>20,217.80</td><td>22,899.10</td><td>24,663.85</td></tr>
</table></td></tr>
</table>

| | | | | | | | |
|---|---|---|---|---|---|---|---|
| | | | | (ರೂ. ಕೋಟಿಗಳಲ್ಲಿ) | | | |
| | | 2 | ಬ್ರೀವರಿ | ಉತ್ಪಾದಿಸಿದ ಮದ್ಯ (ಲಕ್ಷ ಬಲ್ಕ್ ಲೀಟರ್) | 2,170.00 | 2,816.10 | 4,158.55 |
| | | | | ಸಂಗ್ರಹವಾದ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ (ರೂ. ಕೋಟಿಗಳಲ್ಲಿ) | 2,438.16 | 2,757.30 | 4,460.60 |

**ಆಇ 30 ಇಎಲ್‌ಕ್ಯೂ 2024**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು

# ಅನುಬಂಧ

## ಅಬಕಾರಿ ಇಲಾಖೆಯ ಆಡಳಿತ ನಿರ್ವಹಣಾ ನಕ್ಷೆ

ಅಪರ ಮುಖ್ಯ ಕಾರ್ಯದರ್ಶಿಗಳು (ಆರ್ಥಿಕ ಇಲಾಖೆ)

ಅಬಕಾರಿ ಆಯುಕ್ತರು

- ಅಪರ ಅಬಕಾರಿ ಆಯುಕ್ತರು (ಕೇಂದ್ರ ಸ್ಥಾನ ಮತ್ತು ತಪಾಸಣೆ)–01 ಬೆಂಗಳೂರು ಉತ್ತರ & ದಕ್ಷಿಣ, ಮಂಗಳೂರು, ಮೈಸೂರು
- ಅಬಕಾರಿ ಜಂಟಿ ಆಯುಕ್ತರು (ಐಎಂಎಲ್)–01
- ಅಬಕಾರಿ ಅಪರ ಆಯುಕ್ತರು (ನಾರ್ಕೋಟಿಕ್ಸ್)–01
- ಅಪರ ಆಯುಕ್ತರು (ಆಡಳಿತ)–01
- ಅಬಕಾರಿ ಅಪರ ಆಯುಕ್ತರು (ಅಪರಾದ ಮತ್ತು ತಪಾಸಣೆ) ಬೆಳಗಾವಿ ಕೇಂದ್ರಸ್ಥಾನ –01 ಬೆಳಗಾವಿ, ಹೊಸಪೇಟೆ ಕಲಬುರಗಿ ವಿಭಾಗಗಳು
- ಅಬಕಾರಿ ಜಂಟಿ ಆಯುಕ್ತರು (ಗುಪ್ತಚರ & ಆಡಿಟ್)–02
- ಅಬಕಾರಿ ಜಂಟಿ ಆಯುಕ್ತರು (ಡಿಸ್ಟಿಲರಿ ಮತ್ತು ಬ್ರಿವರಿ)–01
- ಅಬಕಾರಿ ಉಪ ಆಯುಕ್ತರು–01, 02, 03 & 04
  - ಅಬಕಾರಿ ಅಧೀಕ್ಷಕರು–07
  - ಅಬಕಾರಿ ಉಪ ಅಧೀಕ್ಷಕರು–06

ವಿಭಾಗೀಯ ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) – 9 ವಿಭಾಗಗಳು

- ಅಬಕಾರಿ ಉಪ ಆಯುಕ್ತರು (ಅಬಕಾರಿ ಜಿಲ್ಲೆಗಳು) – 40
  - ಅಬಕಾರಿ ಅಧೀಕ್ಷಕರು–40 (ಅ ಉ ಆ ಕಛೇರಿ)
  - ಅಬಕಾರಿ ಉಪ ಅಧೀಕ್ಷಕರು (ಉಪ ವಿಭಾಗ) – 75
  - ಅಬಕಾರಿ ನಿರೀಕ್ಷಕರು (ವಲಯಗಳು) – 233
- ಅಬಕಾರಿ ಉಪ ಆಯುಕ್ತರು–02 (ಡಿಸ್ಟಿಲರಿ)
- ಅಬಕಾರಿ ಅಧೀಕ್ಷಕರು–20
  - ಅಬಕಾರಿ ಉಪ ಅಧೀಕ್ಷಕರು–24
  - ಅಬಕಾರಿ ನಿರೀಕ್ಷಕರು 24
- ಅಬಕಾರಿ ಅಧೀಕ್ಷಕರು–08 (ಕೆ.ಎಸ್.ಬಿ.ಸಿ.ಎಲ್. ಡಿಪೋ)
  - ಅಬಕಾರಿ ಉಪ ಅಧೀಕ್ಷಕರು–18
  - ಅಬಕಾರಿ ನಿರೀಕ್ಷಕರು–45

**ಆಇ 30 ಇಎಲ್‌ಕ್ಯೂ 2024**